## ಸರ್ಕಾರದ ಆದೇಶ ಸಂಖ್ಯೆ: ಸಕಕಾ 65 ಬಿಐಎಸ ೨೧ಕ್ಕೆ ಅನುಬಂಧ – ಅ

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಯಮಗಳು:

(1) ಈ ವಸತಿ ಶಾಲೆಗಳನ್ನು '' ಗ್ರಾಮೀಣ ಪ್ರತಿಭಾವಂತ ಹಿಂದುಳಿದ ವರ್ಗಗಳ ವಸತಿ ಶಾಲೆಗಳು '' ಎಂದು ಮತ್ತು ಈ ನಿಯಮಗಳನ್ನು '' ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಯಮಗಳು '' ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ನಡೆಸುವ ವಸತಿ ಶಾಲೆಗಳಿಗೆ ಸರ್ಕಾರಿ ಆದೇಶದ ಸಂಖ್ಯೆ: ಎಸಡಬ್ಲ್ಯೂಎಲ 66 ಬಿಸಿಎ 86 ದಿನಾಂಕ: 13–10–86 ರ ಪ್ರಕಾರ ಹಾಗೂ ಕಾಲಕಾಲಕ್ಕೆ ತಿದ್ದುಪಡಿಗೆ ಒಳಪಟ್ಟ ಹಿಂದುಳಿದ ವರ್ಗಗಳೆಂದು ವರ್ಗೀಕರಿಸಲಾದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.

(3) ಈ ನಿಯಮಗಳು ತಕ್ಷಣದಿಂದ ಜಾರಿಗೆ ಬರುತ್ತವೆ.

(4) ವಸತಿ ಶಾಲೆಗಳಲ್ಲಿ ವಿವಿಧ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪ್ರವೇಶವು ಕೆಳಕಂಡ ಪ್ರಮಾಣದಲ್ಲಿರುತ್ತದೆ.

| | | | |
|---|---|---|---|
| ಎ – ವರ್ಗ | – | ಶೇ. | 8 |
| ಬಿ – ವರ್ಗ | – | ಶೇ. | 22 |
| ಸಿ – ವರ್ಗ | – | ಶೇ. | 24 |
| ಡಿ – ವರ್ಗ | – | ಶೇ. | 13 |
| ಇ – ವರ್ಗ | – | ಶೇ. | 8 |
| ಪ.ಜಾತಿ | – | ಶೇ. | 21 |
| ಪ.ವರ್ಗ | – | ಶೇ. | 4 |
| ಒಟ್ಟು | – | ಶೇ. | 100 |

ವಸತಿ ಶಾಲೆಗಳಿಗೆ ಪ್ರವೇಶವನ್ನು ಮಂಜೂರಾತಿ ಸಂಖ್ಯೆಗೆ ನಿರ್ಬಂಧಗೊಳಿಸಲಾಗಿದ್ದು ಯಾವುದೇ ನಿರ್ದಿಷ್ಟ ವರ್ಗಗಳಿಂದ ಅಗತ್ಯ ಸಂಖ್ಯೆಯ ವಿದ್ಯಾರ್ಥಿಗಳು ಬಾರದೇ ಇದ್ದಲ್ಲಿ ಖಾಲಿ ಬಿದ್ದ ಸ್ಥಾನಗಳನ್ನು ಮೇಲೆ ಹೇಳಿರುವ ಮೀಸಲಾತಿಯನ್ನು ಅನುಸರಿಸಿ ತುಂಬತಕ್ಕದ್ದು.

(5) <u>ಅರ್ಹತೆ</u>: ಮೇಲೆ ಉಲ್ಲೇಖಿಸಿರುವ ಸರ್ಕಾರಿ ಆದೇಶದ ಪ್ರಕಾರ ಗ್ರಾಮೀಣ ಹಿಂದುಳಿದ ವರ್ಗಗಳಿಗೆ ಸೇರಿದ ಮತ್ತು ಕರ್ನಾಟಕ ಸರ್ಕಾರ ನಡೆಸುತ್ತಿರುವ ಅಥವಾ ಸರ್ಕಾರದಿಂದ ಅಂಗೀಕೃತವಾದ ಶೈಕ್ಷಣಿಕ ಸಂಸ್ಥೆಗಳಲ್ಲಿ ನಾಲ್ಕನೇಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಉತ್ತೀರ್ಣ ಅಭ್ಯರ್ಥಿಗಳ ಮಾತ್ರ ಈ ವಸತಿ ಶಾಲೆಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.

(6) ಈ ವಸತಿಶಾಲೆಗಳಿಗೆ ಪ್ರವೇಶ ನೀಡುವುದಕ್ಕಾಗಿ ಒಂದು ಪ್ರವೇಶ ಆಯ್ಕೆ ಸಮಿತಿ ಕೆಳಕಂಡಂತೆ ಇರುತ್ತದೆ:

(ಅ) ಅಧ್ಯಕ್ಷರು – ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು (ಡಿ.ಸಿ)
(ಆ) ಸದಸ್ಯರು – ಸಂಬಂಧಪಟ್ಟ ಜಿಲ್ಲೆಯ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು.
(ಇ) ಸದಸ್ಯ ಕಾರ್ಯದರ್ಶಿ – ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾ ಅಧಿಕಾರಿಗಳು.

ಪ್ರವೇಶ ಸಮಿತಿಯು ವಸತಿಶಾಲೆಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಪ್ರವೇಶ ಪರೀಕ್ಷೆಯ ವೇಳಾಪಟ್ಟಿ ಪ್ರಶ್ನೆ ಪತ್ರಿಕೆಗಳನ್ನು ರಚಿಸುವುದು ಮತ್ತು ಉತ್ತರ ಪತ್ರಿಕೆಗಳ ಮೌಲ್ಯ ಮಾಪನ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸುವುದು ಮುಂತಾದ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದು.

(ಈ) ಪ್ರವೇಶ ಪರೀಕ್ಷೆಯನ್ನು ವಸತಿಶಾಲೆ ಇರುವ ಜಿಲ್ಲೆಗಳ ವಿದ್ಯಾ ಇಲಾಖೆಯ ಆಯಾ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಮೇಲ್ವಿಚಾರಣೆಯಲ್ಲಿ ನಡೆಯತಕ್ಕದ್ದು, ವಸತಿಶಾಲೆಗಳಿಗೆ 10 ವರ್ಷಗಳಿಗೆ ಮೀರಿರುವ ಮತ್ತು 12 ವರ್ಷದ ಒಳಗೆ ಇರುವ ಗ್ರಾಮೀಣ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕೊಡತಕ್ಕದ್ದು. ವಯಸ್ಸನ್ನು ನಿಗದಿ ಮಾಡುವಾಗ ಆಯಾ ಶೈಕ್ಷಣಿಕ ವರ್ಷದ ಜೂನ್ ಮಾಹೆಯನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.